# ವಿಶ್ವವಂದ್ಯ ಗಣಪತಿ

**ಡಾ. ವಿ. ಶ್ರೀಮತಿ**

ವಿಘ್ನನಿವಾರಕ ಗಣಪತಿಯು ಭಾರತದಾದ್ಯಂತ ಪೂಜಿಸಲ್ಪಡುವನು. ಜಾತಿ, ಮತ, ಪಂಥ ಭೇದವಿಲ್ಲದೆ ಭಾರತದ ಜನತೆ ಆರಾಧಿಸುವ ಗಣೇಶನು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ಗಣೇಶ ಚತುರ್ಥಿಯ ಶುಭಸಂದರ್ಭದಲ್ಲಿ ಭಕ್ತಜನರು ಭಾವಭರಿತರಾಗಿ ಹಬ್ಬವನ್ನು ಆಚರಿಸುತ್ತಾರೆ. ಗಣೇಶನ ಹಿನ್ನೆಲೆ, ವಿಶೇಷತೆ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ವಿವರಿಸಿರುವ ಲೇಖಕಿ, ಮೈಸೂರಿನಲ್ಲಿ ಸಂಸ್ಕೃತ ಉಪನ್ಯಾಸಕಿಯಾಗಿದ್ದಾರೆ. ಸಂಗೀತ, ಕಲೆ, ಶಾಸ್ತ್ರ, ಅಧ್ಯಾತ್ಮ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಅವರು ಅನೇಕ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಈ ಪತ್ರಿಕೆಯಲ್ಲೂ ಅವರ ಹಲವು ಲೇಖನಗಳು ಪ್ರಕಟವಾಗಿವೆ.

ಆದಿವಂದ್ಯ, ವಿಘ್ನನಿವಾರಕ ಗಣೇಶನಿಗೆ ನಮ್ಮ ಸಂಸ್ಕೃತಿಯಲ್ಲಿ ಮಹತ್ತರ ಸ್ಥಾನವಿದೆ. ಗಣೇಶನನ್ನು ಸ್ತುತಿಸದೆ ಯಾವ ಮಂಗಳ ಕಾರ್ಯಗಳೂ ಪ್ರಾರಂಭವಾಗುವುದಿಲ್ಲ. ಪ್ರತಿವರ್ಷ ಭಾದ್ರಪದ ಮಾಸದ ಶುಕ್ಲಪಕ್ಷದ ಚತುರ್ಥಿಯ ದಿನ ವರಸಿದ್ಧಿ ವಿನಾಯಕನ ವ್ರತವನ್ನು ಆಚರಿಸುವುದು ಹಾಗೂ ಪ್ರತಿಮಾಸದ ಕೃಷ್ಣಪಕ್ಷದ ಚತುರ್ಥಿಯ ದಿವಸ ಸಂಕಷ್ಟಹರ ಗಣಪತಿಯನ್ನು ಪೂಜಿಸುವುದನ್ನು ನಮ್ಮ ದೇಶದ ಎಲ್ಲೆಡೆ ಕಾಣಬಹುದು. ಆಬಾಲವೃದ್ಧರಾದಿಯಾಗಿ ಸಮಸ್ತರೂ ಶ್ರದ್ಧಾಭಕ್ತಿಗಳಿಂದ ಗಣೇಶನನ್ನು ಪೂಜಿಸುವುದು ನಮ್ಮ ಸಂಪ್ರದಾಯವೇ ಆಗಿದೆ. ಪ್ರಥಮ ವಂದ್ಯನಾದ ಗಣೇಶನ ಆರಾಧನೆ ಇಂತಹ ಸಮಯದಿಂದಲೇ ಪ್ರಾರಂಭವಾಗಿರಬಹುದೆಂದು ಹೇಳುವುದು ಕಷ್ಟಸಾಧ್ಯ.

### ವೇದಗಳಲ್ಲಿ ಗಣಪತಿ

ಅತ್ಯಂತ ಪ್ರಾಚೀನ ಸಾಹಿತ್ಯವಾದ ಋಗ್ವೇದದಲ್ಲೇ ಗಣಪತಿ ಎಂಬ ಹೆಸರಿನ ಮಂತ್ರಗಳನ್ನು ಕಾಣಬಹುದು

**ಗಣಾನಾಂ ತ್ವಾ ಗಣಪತಿಂ ಹವಾಮಹೇ**
**ಕವಿಂ ಕವೀನಾಮುಪಮಶ್ರವಸ್ತಮಮ್ ।**
**ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ**
**ಆನಃ ಶೃಣ್ವನ್ನೂತಿಭಿಃ ಸೀದಸಾದನಮ್ ॥**

*(ಋಗ್ವೇದ: ಮಂಡಲ-೨ ಸೂಕ್ತ-೨೩ ಮಂತ್ರ-೧)*

**ನಿಷು ಸೀದ ಗಣಪತೇ ಗಣೇಷು**
**ತ್ವಾಮಾಹುರ್ವಿಪ್ರತಮಂ ಕವೀನಾಮ್ ।**
**ನ ಋತೇ ತ್ವತ್ ಕ್ರಿಯತೇ ಕಿಂ ಚ ನಾರೇ**
**ಮಹಾಮರ್ಕಂ ಮಘವತ್ರಮರ್ಚ ॥**

*(ಋಗ್ವೇದ: ಮಂಡಲ-೧೦ ಸೂಕ್ತ-೧೧೨ ಮಂತ್ರ-೯)*

ಕೃಷ್ಣಯಜುರ್ವೇದದ ಮೈತ್ರಾಯಣೀಯ ಸಂಹಿತಾ ಮತ್ತು ತೈತ್ತಿರೀಯ ಆರಣ್ಯಕದಲ್ಲಿ ದಂತಿ, ಹಸ್ತಿಮುಖ, ವಕ್ರತುಂಡ ಎಂಬ ನಾಮಗಳನ್ನು ಗಮನಿಸಬಹುದು.

'ಗಣಪತ್ಯಥರ್ವಶೀರ್ಷ'ದಲ್ಲಿ ನೀನೇ ಬ್ರಹ್ಮ-ವಿಷ್ಣು-ರುದ್ರ-ಇಂದ್ರ-ಅಗ್ನಿ ಮುಂತಾಗಿ ಸ್ತುತಿಸಿರುವುದು ಕಂಡುಬರುತ್ತದೆ.



**ತ್ವಂ ಬ್ರಹ್ಮಾ ತ್ವಂ ವಿಷ್ಣುಃ ತ್ವಂ ರುದ್ರಸ್ತ್ವಮಿಂದ್ರಃ ತ್ವಂ ಅಗ್ನಿಃ ತ್ವಂ ವಾಯುಸ್ತ್ವಂ ಸೂರ್ಯಸ್ತ್ವಂ ಚಂದ್ರಮಾಸ್ತ್ವಂ ಬ್ರಹ್ಮ ಭೂರ್ಭುವಸ್ಸುವರೋಮ್ ॥**

'**ಏಕದಂತಾಯ ವಿದ್ಮಹೇ । ವಕ್ರತುಂಡಾಯ ಧೀಮಹಿ । ತನ್ನೋ ದಂತಿಃ ಪ್ರಚೋದಯಾತ್ ।**' ಎಂಬುದು ಗಣೇಶ ಗಾಯತ್ರೀ ಮಂತ್ರ.

ಶ್ರೀಸಾಮಾನ್ಯನ ಕಲ್ಪನೆಯಲ್ಲಿ ಗಣಪತಿಯ ಕಲ್ಪನೆಯು ಮೂಡಿ ಬೆಳೆದುಬಂದ ಬಗೆಗೆ ಅನೇಕ ದಂತಕಥೆಗಳು ಪ್ರಚಲಿತವಿವೆ. ಪುರಾತತ್ತ್ವಕ್ಕೆ ಸಂಬಂಧಿಸಿದಂತೆ, ಶಿಲ್ಪಗಳಲ್ಲಿ, ಸಾಹಿತ್ಯಗಳಲ್ಲಿ, ಪುರಾಣಗಳಲ್ಲಿ, ತಾಂತ್ರಿಕ ಪ್ರಕ್ರಿಯೆಗಳಲ್ಲಿ, ಪೂಜಾವಿಧಿಗಳಲ್ಲಿ ಗಣಪತಿಯ ಸ್ವಭಾವ, ಸ್ವರೂಪಗಳ ಬಗ್ಗೆ ಅನೇಕ ವಿವರಣೆಗಳು ಕಂಡುಬರುತ್ತವೆ. ಆದರೂ ಗಣಪತಿಯ ಕಲ್ಪನೆಯ ವಿಕಾಸ ಯಾವ ಕಾಲಘಟ್ಟದಿಂದ ಪ್ರಾರಂಭವಾಗಿ ಬೆಳೆಯಿತು ಎಂದು ಹೇಳುವುದು ಸುಲಭವಲ್ಲ.

### ಯೋಗಶಾಸ್ತ್ರದಲ್ಲಿ ಗಣಪತಿ :

ನಮ್ಮ ಶರೀರದಲ್ಲಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಎಂಬ ಷಟ್ ಚಕ್ರಗಳಿರುವುವು. ಮೂಲಾಧಾರದ ರೂಪ ತ್ರಿಕೋಣ. ಇದರ ಮೂರು ಕೋಣ

ಗಳಲ್ಲಿ ಕಾಮರೂಪ, ಪೂರ್ಣಗಿರಿ, ಜಾಲಂಧರಗಳೆಂಬ ಮೂರು ಶಕ್ತಿಪೀಠಗಳಿವೆ. ಈ ತ್ರಿಕೋಣದ ಮಧ್ಯದಲ್ಲಿರುವ ಮೂಲಾಧಾರದಲ್ಲಿ ಗಣೇಶನು ನೆಲೆಸಿರುವನು. **ತ್ವಂ ಮೂಲಾಧಾರಸ್ಥಿತೋಽಸಿ ನಿತ್ಯಂ** ಎಂದು ಗಣಪತ್ಯಥರ್ವಶೀರ್ಷವೂ ತಿಳಿಸುತ್ತದೆ.

ಮೂಲಾಧಾರ ಚಕ್ರದಲ್ಲಿರುವ ಕೆಂಪು ಬಣ್ಣದ ನಾಲ್ಕು ದಳದ ಕಮಲದಲ್ಲಿ ಸಿದ್ಧಿಶಕ್ತಿಯುತನಾದ ಗಣಪತಿಯು ನೆಲೆಸಿರುವನು. ಆತನಿಗೆ ೬೦೦ ಅಜಪಾ ಗಾಯತ್ರಿ ಜಪವನ್ನು ನಿವೇದನ ಮಾಡಬೇಕು ಎಂದು 'ರುದ್ರಯಾಮಳ'ವು ತಿಳಿಸುತ್ತದೆ.

**ವಿನಿಯೋಗೋ ಬ್ರಹ್ಮರಂಧ್ರಸಪ್ತಮಕ ಮೂಲಾಧಾರಾಧಿ ಷಟ್‌ಚಕ್ರ ಸ್ಥಿತ ಗಣೇಶಾದಿ ದೇವೇಭ್ಯೋ ಯಥಾಭಾಗಂ ನಿವೇದನಮ್ ।**

ಆತ್ಮ ಪ್ರಸಾದ ಮಂತ್ರಕ್ಕೆ ಪರಾ ಪ್ರಸಾದ ಮಂತ್ರ ಎಂದೂ, ಅಜಪಾ ಗಾಯತ್ರೀ ಮಂತ್ರವೆಂದೂ, ಪಾರಮೇಶ್ವರಿ ವಿದ್ಯೆ ಎಂದೂ ವಿಭಿನ್ನ ನಾಮಗಳಿವೆ.

ನಮ್ಮ ಶ್ವಾಸೋಚ್ಛ್ವಾಸ ಕ್ರಿಯೆಯು ನಡೆಯುವಾಗ 'ಹಂಸಃ' ಎಂಬ ನಾದವು ಸೂಕ್ಷ್ಮವಾಗಿ ಕೇಳಿಬರುತ್ತಿರುತ್ತದೆ. ಒಂದು ದಿನ ಅಂದರೆ ೨೪ ಘಂಟೆಯ ಅವಧಿಯಲ್ಲಿ ಒಟ್ಟು ೨೧,೬೦೦ ಬಾರಿ ಉಸಿರು 'ಹಂ' ಕಾರದಿಂದ ಹೊರಗೆ ಹೋಗುವುದು ಮತ್ತು 'ಸ' ಕಾರದಿಂದ ಒಳಗೆ ಬರುತ್ತದೆ. ಜೀವರಾಶಿಗಳೆಲ್ಲವೂ ನಿರಂತರವಾಗಿ ಜಪಿಸುವ ಇದನ್ನು ಅಜಪಾಗಾಯತ್ರೀ ಎನ್ನಲಾಗಿದೆ.

ಪ್ರತಿದಿನದ ೨೪ ಘಂಟೆಯ ಅವಧಿಯಲ್ಲಿ ಒಂದೊಂದು ಚಕ್ರದಲ್ಲಿ ಉಸಿರಾಡುವ ಶ್ವಾಸೋಚ್ಛ್ವಾಸಗಳ ಕ್ರಮ ಹೀಗಿದೆ.

| ಕ್ರಮ ಸಂಖ್ಯೆ | ಚಕ್ರ | ಘಂಟೆ | ನಿಮಿಷ | ಸೆಕೆಂಡು | ಶ್ವಾಸಗಳು |
|---|---|---|---|---|---|
| ೧. | ಮೂಲಾಧಾರ | ೦ | ೪೦ | – | ೬೦೦ |
| ೨. | ಸ್ವಾಧಿಷ್ಠಾನ | ೬ | ೪೦ | – | ೬೦೦೦ |
| ೩. | ಮಣಿಪೂರ | ೬ | ೪೦ | – | ೬೦೦೦ |
| ೪. | ಅನಾಹತ | ೬ | ೪೦ | – | ೬೦೦೦ |
| ೫. | ವಿಶುದ್ಧ | ೧ | ೬ | ೪೦ | ೧೦೦೦ |
| ೬. | ಆಜ್ಞಾ | ೧ | ೬ | ೪೦ | ೧೦೦೦ |
| ೭. | ಸಹಸ್ರಾರ | ೧ | ೬ | ೪೦ | ೧೦೦೦ |

**ಒಟ್ಟು ೨೪ ಘಂಟೆಗೆ ೨೧೬೦೦ ಉಸಿರಾಟ.**

ಇದೇ ವಿಷಯವನ್ನು ಕರ್ನಾಟಕ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾಗಿರುವ ಶ್ರೀ ಮುತ್ತುಸ್ವಾಮಿ ದೀಕ್ಷಿತರು ತಮ್ಮ 'ಶ್ರೀ ಮೂಲಾಧಾರ ಚಕ್ರ ವಿನಾಯಕ' ಎಂಬ ಕೃತಿಯಲ್ಲಿ '**ವಿಕಟ ಷಟ್ ಶತ ಶ್ವಾಸಾಧಿಕಾರ**' ಎಂದೂ ಮತ್ತು 'ಶ್ರೀ ಮೂಲಾಧಾರ' ಎಂಬ ಕೃತಿಯಲ್ಲಿ '**ಮೂಲಾಧಾರ ಚಕ್ರ ವಿನಾಯಕ**' ಎಂದೂ 'ವಾತಾಪಿ ಗಣಪತಿಂ ಭಜೇ' ಎಂಬ ಕೃತಿಯಲ್ಲಿ '**ಮೂಲಾಧಾರ ಕ್ಷೇತ್ರ ಸ್ಥಿತಂ**' ಎಂಬುದಾಗಿಯೂ ವರ್ಣಿಸಿರುವುದನ್ನು ಕಾಣಬಹುದು.

ಈ ಅಜಪಾ ಜಪದ ಸಾಧನೆಯಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬಹುದು.

## ಗಣಪತಿಯ ಸ್ವರೂಪ

ಆನೆಯ ಮುಖವನ್ನು ಹೊಂದಿ ಇಲಿಯ ಮೇಲೆ ಕುಳಿತಿರುವ ಗಣಪತಿಯ ಮೂರ್ತಿಯು ವೈಶಿಷ್ಟ್ಯಪೂರ್ಣವಾದುದು. ಗಣೇಶನ ತಲೆ ಆತ್ಮವನ್ನು ಸಂಕೇತಿಸುತ್ತದೆ. ಆತನ ದೇಹ ಮಾಯಾ ಅಥವಾ ಪ್ರಾಪಂಚಿಕತೆಯನ್ನು ಸೂಚಿಸುತ್ತದೆ. ಅನೇಕ ಸಂಕೇತಾರ್ಥಗಳನ್ನೂ ಇದು ಒಳಗೊಂಡಿದೆ. ಆನೆಯ ತಲೆ ಜ್ಞಾನವನ್ನೂ, ಸೊಂಡಿಲು ಓಂಕಾರವನ್ನೂ ಸಂಕೇತಿಸುತ್ತದೆ. ಬಲಭಾಗದ ಮೇಲಿನ ಕೈಯಲ್ಲಿರುವ ಅಂಕುಶವು ಮಾನವರ ವಿಘ್ನಗಳನ್ನು ಪರಿಹರಿಸಿ ಶ್ರೇಯಸ್ಸನ್ನುಂಟುಮಾಡುವುದು. ಎಡಭಾಗದ ಮೇಲಿನ ಹಸ್ತದಲ್ಲಿರುವ ಪಾಶವು ಸಂಸಾರಕ್ಲೇಶ ನಿವಾರಕವಾಗಿರುವುದು. ಕೆಳಭಾಗದ ಬಲಗೈಯಲ್ಲಿರುವ ಮುರಿದ ದಂತ ಲೇಖನಿಯಂತಿರುವುದು. ಇದು ತ್ಯಾಗದ ಸಂಕೇತವಾಗಿದೆ. ಮತ್ತೊಂದು ಕೈಯಲ್ಲಿರುವ ಜಪಮಣಿ ಜ್ಞಾನದ ಅವಿಚ್ಛಿನ್ನತೆಯನ್ನು ಸೂಚಿಸುತ್ತದೆ. ಸೊಂಡಿಲಿನಲ್ಲಿರುವ ಸಿಹಿತಿಂಡಿಯು ಆತ್ಮದ ಸವಿರುಚಿಯ ಆಸ್ವಾದನೆಯನ್ನು ಶ್ರುತಪಡಿಸುತ್ತದೆ. ಮೊರದಂತಿರುವ ಕಿವಿಗಳು ಭಕ್ತರ ಮೊರೆಯನ್ನು ಆಲಿಸುವನು ಎಂಬ ವಿಶ್ವಾಸವನ್ನು ಮೂಡಿಸುತ್ತದೆ. ಸೊಂಟದ ಸುತ್ತ ಇರುವ ಹಾವು ಶಕ್ತಿಯ ಸಂಕೇತವಾಗಿರುವುದು. ಇಲಿಯನ್ನು ವಾಹನವನ್ನಾಗಿ ಹೊಂದಿರುವುದು ಈತನ ವಿನಯದ ಸಂಕೇತವಾಗಿರುವುದು.

ಆಗಮಗಳಲ್ಲಿ ಗಣಪತಿಯ ಹದಿನಾರು ಸ್ವರೂಪಗಳನ್ನು ವರ್ಣಿಸಲಾಗಿದೆ. ಬಾಲಗಣಪತಿ, ತರುಣಗಣಪತಿ, ಭಕ್ತಗಣಪತಿ, ವೀರಗಣಪತಿ, ಶಕ್ತಿಗಣಪತಿ, ದ್ವಿಜಗಣಪತಿ, ಉಚ್ಛಿಷ್ಟಗಣಪತಿ, ವಿಘ್ನವಿನಾಯಕ, ಕ್ಷಿಪ್ರಗಣಪತಿ, ಹೇರಂಬಗಣಪತಿ, ಲಕ್ಷ್ಮೀಗಣಪತಿ, ಮಹಾಗಣಪತಿ, ಸಿದ್ಧಿವಿನಾಯಕ, ವಿಜಯಗಣಪತಿ, ನೃತ್ಯಗಣಪತಿ, ಊರ್ಧ್ವಗಣಪತಿ ಎಂಬುದಾಗಿ. ಪ್ರತಿಯೊಂದು ಸ್ವರೂಪಕ್ಕೂ ಪ್ರತ್ಯೇಕ ಪೂಜಾವಿಧಿ ಹಾಗೂ ಮಂತ್ರಗಳಿವೆ.

ಆಗಮಗಳಲ್ಲಿ ಶ್ರೀಗಣೇಶನ ಆರಾಧನೆಯು ಕಂಡುಬಂದಿದೆಯೆನ್ನಲು ಶ್ರೀಮುತ್ತುಸ್ವಾಮಿ ದೀಕ್ಷಿತರು ತಮ್ಮ 'ಶ್ರೀಗಣನಾಥಂ ಭಜರೇ' ಎಂಬ ಕೃತಿಯಲ್ಲಿ '**ಆಗಮಾದಿ ಸನ್ನುತಂ**' ಎಂದು ಸ್ತುತಿಸಿದ್ದಾರೆ.

**ಓಂಕಾರರೂಪೀ ಭಗವಾನ್ ಯೋ ವೇದಾದೌ ಪ್ರತಿಷ್ಠಿತಃ ।**
**ಯಂ ಸದಾ ಮುನಯೋ ದೇವಾಃ ಸ್ಮರಂತೀಂದ್ರಾದಯೋ ಹೃದಿ ॥**

ಗಣೇಶನು ಓಂಕಾರಸ್ವರೂಪಿಯು. ಭಗವಂತನು. ವೇದಗಳಿಗೂ ಆಧಾರನು. ಇಂತಹವನನ್ನು ಇಂದ್ರನೇ ಮೊದಲಾದ ದೇವತೆಗಳೂ, ಋಷಿಗಳೂ ಸದಾಕಾಲವೂ ಧ್ಯಾನಿಸುತ್ತಿರುವರು ಎಂಬುದಾಗಿ ಗಣೇಶ ಪುರಾಣವು ತಿಳಿಸುತ್ತದೆ.

## ಪುರಾಣಗಳಲ್ಲಿ ಗಣಪತಿ

ಗಣೇಶನಿಗೆ ಸಂಬಂಧಿಸಿದಂತೆ ಗಣೇಶಪುರಾಣ ಹಾಗೂ ಮುದ್ಗಲ ಪುರಾಣಗಳೆಂಬ ಎರಡು ಪುರಾಣಗಳಿವೆ. ಸ್ಕಾಂದಪುರಾಣದಲ್ಲಿ ಗಣಪತಿಯ ಪೂಜಾವಿಧಾನ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಅನೇಕ ಪುರಾಣಗಳಲ್ಲಿ ಗಣಪತಿಯನ್ನು ಕುರಿತಂತೆ ಹಲವಾರು ಕಥೆಗಳು ರಚನೆಯಾಗಿವೆ.

ಗಣಪತಿಗೆ ಅನೇಕ ಹೆಸರುಗಳು ಪ್ರಾಪ್ತವಾಗಲು ಸಂಭವಿಸಿದ ಅನೇಕ ಘಟನೆಗಳನ್ನು ಪುರಾಣಗಳು ದಾಖಲಿಸಿವೆ. ಅದರಲ್ಲಿ ಒಂದು ವಿಶಿಷ್ಟನಾಮ 'ಢುಂಢಿ ಗಣೇಶ'. ಢುಂಢಿ ಎಂಬ ಹೆಸರು ಗಣೇಶಪುರಾಣದ ಉಪಾಸನಾಖಂಡದಲ್ಲಿ ಬರುವ ಶ್ರೀಗಣೇಶ ಸಹಸ್ರನಾಮದಲ್ಲಿದೆ. ಶ್ರೀಗಣೇಶ ಪುರಾಣದಲ್ಲಿ 'ಢುಂಢಿ' ಎಂಬ ಹೆಸರಿನ ಉಲ್ಲೇಖ ಕಂಡುಬರುತ್ತದೆ:

**ಶೇಷೇಣಾರಾಧಿತೋ ಢುಂಢಿಃ ಧರಾಧರಣಹೇತವೇ ।**

ಧರೆಯನ್ನು ಧರಿಸುವ ಧೈರ್ಯ, ಸಾಮರ್ಥ್ಯಗಳು ತನಗೆ ಉಂಟಾಗಲಿ ಎಂದು ಸಹಸ್ರಫಣನಾದ ಆದಿಶೇಷನು ಶ್ರೀಗಣೇಶನನ್ನು ಢುಂಢಿರಾಜನೆಂದು ಕರೆದು ಅರ್ಚಿಸಿದನು.

**ಗವೇಷಯಂಶ್ಚ ನಾನಾರ್ಥಾನ್ ತತ್ತತ್ಕರ್ಮಾಣಿ ಯೋಜಯನ್ ।**
**ಗವೇಷಣೇ ಢುಂಢಿರಯಂ ಧಾತುರುಕ್ತೋ ಮನೀಷಿಭಿಃ ॥**

'ಆಯಾ ಪ್ರಾಣಿಗಳನ್ನು ತತ್ತದುಚಿತ ವರ್ಣಾಶ್ರಮ ಧರ್ಮ ಕರ್ಮಗಳಲ್ಲಿ ನಿಯೋಜಿಸುತ್ತಾ ಅನೇಕ ಸೂಕ್ಷ್ಮಾಂಶಗಳನ್ನು ಅರಸುವಂತೆ ಭಕ್ತರಿಗೆ ಸದ್ಬುದ್ಧಿಯನ್ನು ನೀನು ಕೊಡತಕ್ಕವನು. ಸುಸಂಸ್ಕೃತ ಒಂದಕ್ಕಲ್ಲದೆ ಬೇರೆ ಯಾವ ಉಪಕರಣಗಳಿಗೂ ನೀನು ಅಳವಡತಕ್ಕವನಲ್ಲ. ಬಹು ಸೂಕ್ಷ್ಮಮತಿಯಿಂದ ಅರಸಿದರೆ ಮಾತ್ರ ಸಾರಭೂತನಾದ ನೀನು ಗೋಚರಿಸುವೆ. ಆದ್ದರಿಂದಲೇ ನಿನ್ನನ್ನು ಢುಂಢಿ ಅಂದರೆ ಅರಸಬೇಕಾದವನು ಎಂದು ತಿಳಿದವರು ಕರೆಯುತ್ತಾರೆ.'

ಕಾಶಿಯಲ್ಲಿರುವ ಗಣೇಶಮೂರ್ತಿಗೆ ಢುಂಢಿ ಎಂಬ ಹೆಸರಿದೆ. ಕಾಲರುದ್ರನು ಮಾಡಿರುವ ಶಿವಸ್ತುತಿಯಲ್ಲಿ ಈ ನಾಮವನ್ನು ಕಾಣಬಹುದು.

**ಅಂಬಾತ್ರ ಪ್ರಿಯದಾಯಿನೀ ಭಗವತಃ ಪುತ್ರೋऽಪ್ಯಸೌ ಢುಂಢಿರಾಟ್ ।**
**ದಂಡ್ಯಾನ್ ದಂಡಯತಿ ಪ್ರತಿಕ್ಷಣಮಸೌ ಶ್ರೀ ದಂಡಪಾಣಿಃ ಸದಾ ॥**

'ಜಗನ್ಮಾತೆಯಾದ ಅನ್ನಪೂರ್ಣೆಯು ಭಕ್ತರಿಗೆ ಅನ್ನವನ್ನು ನೀಡುತ್ತಾ ಈ ಕಾಶೀಕ್ಷೇತ್ರದಲ್ಲಿ ನೆಲೆಸಿರುವಳು. ನಿನ್ನ ಮಗನಾದ ಢುಂಢಿರಾಜನು ದುಷ್ಟರನ್ನು ಶಿಕ್ಷಿಸುತ್ತಾ ದಂಡಧಾರಿಯಾಗಿ ಈ ಕಾಶಿಯಲ್ಲಿ ನಿಂತಿರುವನು.'

ಏಕದಂತ ಎಂಬುದು ಗಣೇಶನ ಪ್ರಸಿದ್ಧ ನಾಮಗಳಲ್ಲೊಂದು. ಗಣೇಶನ ಒಂದು ದಂತವು ಮುರಿದು ಅದನ್ನು ಕೈಯಲ್ಲಿ ಹಿಡಿದುಕೊಂಡಿರುವುದಕ್ಕೆ ಕಾರಣವನ್ನು ಶ್ರೀಭವಿಷ್ಯಮಹಾಪುರಾಣವು ಈ ರೀತಿ ತಿಳಿಸುತ್ತದೆ :

ಶಿವನ ಪುತ್ರನಾದ ಕುಮಾರಸ್ವಾಮಿಯು ಸ್ತ್ರೀ-ಪುರುಷರ ಲಕ್ಷಣಗಳನ್ನು ಪ್ರತಿಪಾದಿಸುವ ಗ್ರಂಥವನ್ನು ರಚಿಸಿದನು. ಆದರೆ ಅದರಲ್ಲಿರುವ ಸ್ತ್ರೀ-ಪುರುಷ ಲಕ್ಷಣಗಳಾವುವೂ ತನ್ನಲ್ಲಿಲ್ಲವೆಂದು ಕುಪಿತಗೊಂಡ ಗಣೇಶನು ಆ ಕಾರ್ಯಕ್ಕೆ ವಿಘ್ನವನ್ನುಂಟುಮಾಡಿದನು. ಇದರಿಂದ ಕೋಪಗೊಂಡ ಷಣ್ಮುಖನು ಗಣೇಶನ ಒಂದು ದಂತವನ್ನು ಮುರಿದು ಅದರಿಂದಲೇ ಆತನನ್ನು ಹೊಡೆದನು.

ಅನಂತರ ಶಿವನು ಷಣ್ಮುಖನನ್ನು ಸಮಾಧಾನಪಡಿಸಿ ಆ ದಂತವನ್ನು ಪುನಃ ಗಣೇಶನಿಗೆ ಕೊಡಿಸಿದನು. ಆಗ ಷಣ್ಮುಖನು- 'ಯಾವಾಗ ಗಣೇಶನು ಈ ದಂತವನ್ನು ತನ್ನ ಕೈಯಿಂದ ಬಿಡುವನೋ ಆಗ ಇದು ಆತನನ್ನೇ ಭಸ್ಮಮಾಡಿಬಿಡುತ್ತದೆ' ಎಂದು ಹೇಳಿ ಮುರಿದ ದಂತವನ್ನು ನೀಡಿದನು. ಇದರಿಂದಾಗಿ ಗಣೇಶನು ಸರ್ವದಾ ದಂತವನ್ನು ತನ್ನ ಕೈಯಲ್ಲಿ ಹಿಡಿದಿರುವನು.

ಯಾವುದೇ ಕಾರ್ಯದ ಆರಂಭದಲ್ಲಿ ಗಣೇಶನನ್ನು ಪೂಜಿಸುವುದು ಸಂಪ್ರದಾಯವಾಗಿದೆ. ಆದಿವಂದ್ಯನಾದ ಗಣೇಶನಿಗೆ ಅಗ್ರಪೂಜೆ ಸಲ್ಲಲು ಕಾರಣ ಪದ್ಮಮಹಾಪುರಾಣದಲ್ಲಿ ಈ ರೀತಿ ವರ್ಣಿತವಾಗಿದೆ.

ಪಾರ್ವತಿಯು ಮಹೇಶ್ವರನಿಂದ ಸ್ಕಂದನನ್ನೂ, ಗಣೇಶನನ್ನೂ ಮಕ್ಕಳನ್ನಾಗಿ ಪಡೆದಳು. ಇವರು ಅತ್ಯಂತ ಶೂರರು. ದೇವತೆಗಳು ಈ ಇಬ್ಬರು ಮಕ್ಕಳನ್ನು ಕಂಡು ಅತ್ಯಂತ ಶ್ರದ್ಧೆ ಮತ್ತು ಸಂತೋಷದಿಂದ ಅಮೃತದಲ್ಲಿ ಕಡುಬನ್ನು ಮಾಡಿ ಪಾರ್ವತಿಗೆ ನೀಡಿದರು. ಮಕ್ಕಳಿಬ್ಬರೂ ಆ ಕಡುಬನ್ನು ಕಂಡು ತನಗೆ ನೀಡಬೇಕೆಂದು ಕೇಳಿದರು. ಆಗ ಪಾರ್ವತಿಯು ಆ ಕಡುಬಿನ ಮಹಿಮೆಯನ್ನು ತಿಳಿಸಿದಳು – ''ಅಮೃತದಿಂದ ನಿರ್ಮಿತವಾಗಿರುವ ಇದರ ಹೆಸರು ಮಹಾಬುದ್ಧಿ. ಇದನ್ನು ಮೂಸಿ ನೋಡುವವನೂ ಅಮರನಾಗುತ್ತಾನೆ. ಸರ್ವಶಾಸ್ತ್ರಗಳನ್ನೂ ಅರಿತವನಾಗುತ್ತಾನೆ. ತಂತ್ರಗಳೆಲ್ಲವೂ, ಶಸ್ತ್ರಾಸ್ತ್ರಗಳೆಲ್ಲವೂ ಆತನ ಕರಗತವಾಗುತ್ತದೆ. ಬುದ್ಧಿವಂತನೂ, ಸಕಲ ತತ್ತ್ವಗಳನ್ನು ಬಲ್ಲವನೂ ಆಗುತ್ತಾನೆ. ಹಾಗಾಗಿ ಯಾರು ಅನೇಕ ಧರ್ಮಗಳನ್ನು ತಿಳಿದು, ಅನೇಕ ಸಿದ್ಧಿಗಳನ್ನು ಹೊಂದುತ್ತಾನೋ ಅವನಿಗೆ ಇದನ್ನು ಕೊಡುತ್ತೇನೆ. ಇದು ನಿಮ್ಮ ತಂದೆಗೂ ಸಮ್ಮತವಾದುದು.'' ತಾಯಿಯು ಈ ರೀತಿ ಹೇಳಿದೊಡನೆಯೇ ಸ್ಕಂದನು ತನ್ನ ವಾಹನವಾದ ನವಿಲಿನ ಮೇಲೆ ಕುಳಿತು ಎಲ್ಲ ತೀರ್ಥಗಳಲ್ಲೂ ಸ್ನಾನ ಮಾಡಿಕೊಂಡು ಬಂದನು.

ಅಷ್ಟರಲ್ಲಿ ಗಣೇಶನು ತನ್ನ ತಂದೆ-ತಾಯಿಗಳನ್ನು ಪ್ರದಕ್ಷಿಣೆ ಮಾಡಿ ಸಂತೋಷದಿಂದ ಎದುರಿನಲ್ಲಿ ನಿಂತುಕೊಂಡನು. ಇದನ್ನು ಕಂಡು ಪಾರ್ವತಿಯು – ''ಸರ್ವತೀರ್ಥಗಳಲ್ಲಿ ಸ್ನಾನ ಮಾಡಿ, ಎಲ್ಲ ದೇವರನ್ನೂ ಪೂಜಿಸಿ, ಯಜ್ಞಗಳನ್ನೂ-ವ್ರತಗಳನ್ನೂ ಮಾಡಿ,

ಮಂತ್ರ-ಯೋಗಗಳಿಂದ ಸಿದ್ಧಿಯನ್ನು ಪಡೆದವನ ಪುಣ್ಯವು, ತಂದೆತಾಯಿಯರ ಪೂಜೆಯನ್ನು ಮಾಡಿದವನ ಪುಣ್ಯದ ಹದಿನಾರನೆಯ ಒಂದು ಭಾಗಕ್ಕೂ ಸಮನಾಗುವುದಿಲ್ಲ. ಆದ್ದರಿಂದ ಅನೇಕ ಪುತ್ರರಿಗಿಂತಲೂ, ಅನೇಕ ಗುಣಗಳಿಗಿಂತಲೂ ಈ ವಿನಾಯಕನೇ ಶ್ರೇಷ್ಠನು. ದೇವನಿರ್ಮಿತ ಕಡುಬನ್ನು ಈತನಿಗೇ ನೀಡುತ್ತೇನೆ. ಈ ಕಾರಣದಿಂದ ಈತನಿಗೆ ಅಗ್ರಪೂಜೆಯು ಸಲ್ಲಲಿ. ವೇದಶಾಸ್ತ್ರಗಳ ಆದಿಯಲ್ಲಿಯೂ ಈತನಿಗೆ ನಿತ್ಯವೂ ಪೂಜೆಯು ಸಲ್ಲಲಿ'' ಎಂದಳು. ಆಗ ಈಶ್ವರನೂ ಗಣೇಶನಿಗೆ ಅನೇಕ ವರಗಳನ್ನು ನೀಡಿದನು.


ಗಣೇಶನು ಮೂಷಿಕವಾಹನ ಎಂದೇ ಪ್ರಸಿದ್ಧನಾಗಿರುವನು. ಇಲಿಯನ್ನು ಆತ ಹೇಗೆ ವಾಹನವನ್ನಾಗಿ ಹೊಂದಿದನು ಎಂಬುದನ್ನು 'ಗಣೇಶಪುರಾಣ'ದಲ್ಲಿ ಈ ರೀತಿ ವಿವರಿಸಲಾಗಿದೆ:

ಒಮ್ಮೆ ದೇವಸಭೆಯಲ್ಲಿ ಮುನಿಗಳೂ, ದೇವತೆಗಳೆಲ್ಲರೂ ಸೇರಿರುವಾಗ ಕ್ರೌಂಚ ಎಂಬ ಗಂಧರ್ವನು ವಿಳಂಬವಾಗಿ ಆಗಮಿಸಿದನು. ಗಡಿಬಿಡಿಯಲ್ಲಿ ಬಂದ ಆತನು ಅಲ್ಲಿ ಕುಳಿತಿದ್ದ ವಾಮದೇವ ಮಹರ್ಷಿಗಳನ್ನು ಎಡವಿದನು. ಕೋಪಗೊಂಡ ಋಷಿಗಳು, ''ನೀನು ಸೊಕ್ಕಿನಿಂದ ಮೆರೆಯುತ್ತಿರುವಾಗ ಗಣೇಶನು ನಿನ್ನನ್ನು ತನ್ನ ವಾಹನವನ್ನಾಗಿ ಮಾಡಿಕೊಳ್ಳುವನು'' ಎಂದು ಶಾಪಕೊಟ್ಟರು. ಕೂಡಲೇ ಕ್ರೌಂಚನು ದೊಡ್ಡ ಇಲಿಯಾಗಿ ಪರಾಶರ ಮಹರ್ಷಿಗಳ ಆಶ್ರಮದಲ್ಲಿ ಬಿದ್ದುಬಿಟ್ಟನು.

ಭಯಂಕರವಾದ ಆ ಇಲಿಯ ಆಕೃತಿ ಹಾಗೂ ಅದು ನೀಡುತ್ತಿದ್ದ ತೊಂದರೆಗಳಿಂದ ಮುನಿಗಳಿಗೆ ಭಯವಾಯಿತು. ಅವರ ಸಂಕಟವನ್ನು ಕಂಡು, ಪರಾಶರರ ಪುತ್ರನಾಗಿ ಅವತರಿಸಿದ್ದ ಗಣೇಶನು ತಂದೆಗೆ ಸಮಾಧಾನ ಹೇಳಿ, ತಾನು ಆ ಇಲಿಯನ್ನು ನಿಗ್ರಹಿಸುವುದಾಗಿ ತಿಳಿಸಿದನು. ಕೋಟಿಸೂರ್ಯ ಪ್ರಕಾಶವುಳ್ಳ ತನ್ನ ಪಾಶಾಯುಧವನ್ನು ಇಲಿಯ ಮೇಲೆ ಪ್ರಯೋಗಿಸಿದನು. ಅಂತರಿಕ್ಷ ಮಾರ್ಗವಾಗಿ ಬಂದ ಆ ಪಾಶಾಯುಧವು ಪಾತಾಳದಲ್ಲಿ ಅಡಗಿದ್ದ ಆ ಇಲಿಯ ಕೊರಳಿಗೆ ಕುಣಿಕೆ ಹಾಕಿ ಬಿಗಿದು ಎಳೆದು ತಂದು ಬಾಲಕ ಗಣೇಶನೆದುರಿಗೆ ಹಾಕಿತು. ತನ್ನನ್ನು ಬಂಧಿಸಿದ ಗಣೇಶನ ದರ್ಶನವಾಗುತ್ತಲೇ ಆ ದೇವನ ಮಹಿಮೆ, ಸ್ವರೂಪವೆಲ್ಲವನ್ನೂ ತಿಳಿದು ಆ ಇಲಿಯು ವಿನೀತವಾಯಿತು. ಆತನನ್ನು ಸ್ತುತಿಸಿತು. ಪ್ರಸನ್ನನಾದ ಗಣೇಶನು ''ವರವನ್ನು ಬೇಡು'' ಎನ್ನಲು ಪುನಃ ಅಹಂಕಾರವನ್ನು ಹೊಂದಿದ ಆ ಇಲಿಯು, ''ನಾನೇ ನಿನಗೆ ವರವನ್ನು ಕೊಡಲು ಸಮರ್ಥನಾಗಿದ್ದೇನೆ. ಬೇಕಾದ್ದನ್ನು ಕೇಳು'' ಎಂದಿತು. ಆಗ ಗಣೇಶನು, ''ನೀನು ನನ್ನ ವಾಹನವಾಗಬೇಕು'' ಎಂದು ನುಡಿದು ಆ ಇಲಿಯನ್ನು ತನ್ನ ವಾಹನವನ್ನಾಗಿ ಮಾಡಿಕೊಂಡನು.

### ಮಹಾಭಾರತದ ರಚನೆಯಲ್ಲಿ ಗಣೇಶನ ಪಾತ್ರ

ವ್ಯಾಸಮಹರ್ಷಿಗಳು ಮಹಾಭಾರತದ ವಿಷಯವನ್ನು ತಮ್ಮ ಬುದ್ಧಿಯಲ್ಲಿ ಗ್ರಹಿಸಿ ಇದನ್ನು ಶಿಷ್ಯರಿಗೆ ಅಧ್ಯಾಪನ ಮಾಡಿಸುವುದು ಹೇಗೆ ಎಂದು ಚಿಂತಿಸುತ್ತಿದ್ದರು. ಇದನ್ನರಿತ ಬ್ರಹ್ಮದೇವನು ವ್ಯಾಸರ ಎದುರು ಪ್ರತ್ಯಕ್ಷನಾಗುವನು. ಬ್ರಹ್ಮದೇವನನ್ನು ಸತ್ಕರಿಸಿದ ವ್ಯಾಸರು ತಾವು ಬುದ್ಧಿಯಲ್ಲಿ ಗ್ರಹಿಸಿರುವ ಭಾರತದ ಕಥೆಯನ್ನು ಸೂಕ್ಷ್ಮವಾಗಿ ತಿಳಿಸಿ, ಈ ಗ್ರಂಥವನ್ನು ಬರೆದುಕೊಳ್ಳಬಲ್ಲಂತಹ ಲೇಖಕರು ಇಲ್ಲವಲ್ಲ ಎಂಬ ತಮ್ಮ ಕಳವಳವನ್ನು ತಿಳಿಸುತ್ತಾರೆ. ಆಗ ಬ್ರಹ್ಮದೇವನು ಈ ಮಹಾನ್



ಗ್ರಂಥದ ಮಹಿಮೆಯನ್ನು ಪ್ರಶಂಸಿಸಿ ''ಈ ಗ್ರಂಥಕ್ಕೆ ಲೇಖಕನಾಗಲು ಗಣೇಶನನ್ನು ಪ್ರಾರ್ಥಿಸು'' ಎಂದು ಸೂಚಿಸಿ ಅಂತರ್ಧಾನನಾದನು. ಅದರಂತೆ ವ್ಯಾಸರು ಗಣೇಶನನ್ನು ಸ್ಮರಿಸಲು ಕೂಡಲೇ ಆತನು ಪ್ರತ್ಯಕ್ಷನಾದನು. ''ನಾನು ಹೇಳುವ ಭಾರತ ಗ್ರಂಥವನ್ನು ನೀನು ಬರೆಯಬೇಕು'' ಎಂದು ವ್ಯಾಸರು ಪ್ರಾರ್ಥಿಸಲು ಗಣಪತಿಯು ಒಂದು ನಿಬಂಧನೆಯನ್ನು ಹೇಳುತ್ತಾನೆ. ''ಒಮ್ಮೆ ನಾನು ಬರೆಯಲು ಪ್ರಾರಂಭಿಸಿದನಂತರ ನನ್ನ ಲೇಖನಿಗೆ ಕ್ಷಣವೂ ವಿರಾಮ ನೀಡದಂತೆ ಹೇಳಿದರೆ ಮಾತ್ರ ನಾನು ಬರೆಯುತ್ತೇನೆ'' ಎನ್ನುತ್ತಾನೆ. ಅದನ್ನು ಕೇಳಿದ ವ್ಯಾಸರು ತಮ್ಮದೂ ಒಂದು ನಿಬಂಧನೆ ಎನ್ನುವರು. ''ನಾನು ಹೇಳುವ ಶ್ಲೋಕವನ್ನು ಅರ್ಥಮಾಡಿಕೊಂಡು ಬರೆಯುವುದಾದರೆ ನೀನು ಅಪೇಕ್ಷಿಸಿದಂತೆಯೇ ನಾನು ಹೇಳುತ್ತೇನೆ'' ಎಂದು. ಗಣಪತಿಯು ಇದಕ್ಕೆ ಸಮ್ಮತಿಸುವನು.

ಗಣಪತಿಯ ಬರವಣಿಗೆಯ ವೇಗವನ್ನು ತಡೆಯಲು ವ್ಯಾಸರು ಅನೇಕ ಗೂಢಾರ್ಥಗಳನ್ನುಳ್ಳ ಶ್ಲೋಕಗಳನ್ನು ರಚಿಸಿ ಹೇಳುತ್ತಿದ್ದರು. ಇವುಗಳನ್ನು ಗಣಪತಿಯು ಅರ್ಥೈಸಿಕೊಂಡು ಬರೆಯುವಷ್ಟರಲ್ಲಿ ವ್ಯಾಸರು ಮುಂದಿನ ಶ್ಲೋಕಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಹೀಗೆ ಸುಲಭವಾಗಿ ಅರ್ಥವಾಗದ ಗೂಢಾರ್ಥವುಳ್ಳ ೮೮೦೦ ಶ್ಲೋಕಗಳನ್ನು ವ್ಯಾಸರು ಭಾರತದಲ್ಲಿ ಅಡಕಗೊಳಿಸಿದ್ದಾರೆ. ಹೀಗೆ ಗಣಪತಿಯು ವೇದವ್ಯಾಸರಿಂದ ಹೇಳಲ್ಪಟ್ಟ ಮಹಾಭಾರತವನ್ನು ಬರೆದು ಜಗತ್ತಿಗೆ ನೀಡಿರುವನು.

### ವಿದೇಶಗಳಲ್ಲಿ ಗಣಪತಿ

ನಮ್ಮ ದೇಶದಲ್ಲಷ್ಟೇ ಅಲ್ಲದೆ ಅನೇಕ ದೇಶಗಳಲ್ಲಿ ಗಣೇಶನ ಕಲ್ಪನೆ ಮೂಡಿರುವುದನ್ನು, ಆತನ ಪೂಜೆ ನಡೆಯುತ್ತಿತ್ತು ಎಂಬುದನ್ನು ಇತಿಹಾಸಕಾರರು, ಸಂಶೋಧಕರು ಸಂಶೋಧಿಸಿದ್ದಾರೆ.

ಶ್ರೀಲಂಕಾದಲ್ಲಿ ಬೌದ್ಧರ ಅನೇಕ ಸ್ತೂಪಗಳಲ್ಲಿ ಗಣೇಶನ ಶಿಲ್ಪಗಳನ್ನು ಕಾಣಬಹುದು. ಬೌದ್ಧ ಸ್ತೂಪಗಳೂ, ವಿಹಾರಗಳೂ ಇರುವಂತೆ ಶ್ರೀಲಂಕಾದಲ್ಲಿ ಅನೇಕ ಹಿಂದೂ ದೇವಾಲಯಗಳನ್ನು ಕಾಣಬಹುದು. ಅಲ್ಲಿ ಗಣೇಶನ ಶಿಲ್ಪಗಳು ಕಂಡುಬರುತ್ತವೆ.

ಬರ್ಮಾ ಬೌದ್ಧರ ನಾಡಾಗಿದ್ದರೂ ಅನೇಕ ಗಣೇಶನ ಮೂರ್ತಿಗಳು ಅಲ್ಲಿ ದೊರಕಿವೆ. ಹಿಂದೆ ಅಲ್ಲಿ ಗಣೇಶನನ್ನು ಪೂಜಿಸಲಾಗುತ್ತಿತ್ತು.

ಥ್ಯಾಲ್ಯಾಂಡ್‌ನ ಪ್ರಾಚೀನ ಹಸ್ತಪ್ರತಿಯೊಂದರಲ್ಲಿ ಗಣಪತಿಯ ರೇಖಾಚಿತ್ರಗಳಿವೆ.

ಕಾಂಬೋಡಿಯಾದಲ್ಲಿ ಹಲವು ಹಿಂದೂ ದೇವಾಲಯಗಳಿದ್ದು ಅವುಗಳಲ್ಲಿ ಗಣೇಶನ ಮೂರ್ತಿಗಳಿವೆ. ಗಣೇಶನ ಗುಡಿಗಳು ಈ ದೇಶದಲ್ಲಿ ಇತ್ತು ಎಂಬುದಕ್ಕೆ ಶಾಸನಾಧಾರಗಳಿವೆ.

ಜಾವ ದ್ವೀಪವೂ ಭಾರತದೊಡನೆ ವಿಶೇಷವಾಗಿ ಸಾಂಸ್ಕೃತಿಕ ಸಂಬಂಧವನ್ನು ಹೊಂದಿತ್ತು. ಇಲ್ಲಿ ಅನೇಕ ಗಣೇಶನ ವಿಗ್ರಹಗಳು ದೊರಕಿವೆ. ಇಲ್ಲಿ ಶಿವಾಲಯಗಳಲ್ಲಿ ಗಣೇಶನಿಗೆ ವಿಶಿಷ್ಟ ಸ್ಥಾನವಿತ್ತು.

ಚೀನಾ ದೇಶದಲ್ಲೂ ಅನೇಕ ಗಣೇಶ ಶಿಲ್ಪಗಳು ದೊರಕಿವೆ. ಹಾಗಾಗಿ ಇಲ್ಲೂ ಗಣೇಶನ ಕಲ್ಪನೆ ವ್ಯಾಪಿಸಿದ್ದನ್ನು ಗಮನಿಸಬಹುದು.

ಜಪಾನಿನಲ್ಲಿ ಗಣೇಶನ ಮುಖ ಮನುಷ್ಯ ಮುಖವನ್ನು ಹೋಲುತ್ತದೆ. ಇಲ್ಲಿನ ಕಾಂಗಿಟೇನ್ ಗಣಪತಿ ತಂತ್ರಯೋಗದ ತತ್ತ್ವವನ್ನು ಸಾಂಕೇತಿಕವಾಗಿ ಪ್ರತಿಪಾದಿಸಿರುವುದನ್ನು ಕಾಣಬಹುದು.

ಅಫಘಾನಿಸ್ತಾನದಲ್ಲಿ ಬೌದ್ಧ ಹಾಗೂ ಹಿಂದೂ ದೇವತೆಗಳ ಅನೇಕ ಶಿಲ್ಪಗಳು ದೊರಕಿವೆ. ಅವುಗಳಲ್ಲಿ ಗಣೇಶನ ವಿಗ್ರಹವೂ ಸೇರಿದೆ.


ನೇಪಾಳವು ಹಿಂದೆ ಭಾರತದ ಒಂದು ಭಾಗದಂತೆಯೇ ಇದ್ದಿದ್ದರಿಂದ ಗಣೇಶನ ಕಲ್ಪನೆ ಇಲ್ಲಿ ವಿಶಾಲವಾಗಿ ಬೆಳೆದಿತ್ತು. ಬೌದ್ಧರು ಹಾಗೂ ಹಿಂದೂಗಳು ಗಣೇಶನನ್ನು ಪೂಜಿಸುತ್ತಿದ್ದರು. ಇಲ್ಲಿ ಗಣೇಶನ ಅನೇಕ ಪ್ರತಿಮೆಗಳು ದೊರಕಿವೆ.

ಟಿಬೆಟ್‌ನಲ್ಲೂ ಅಲ್ಲಲ್ಲಿ ಗಣೇಶನ ವಿಗ್ರಹಗಳು ದೊರಕಿವೆ. ಇಲ್ಲಿನ ದೇವಾಲಯಗಳ ಮಹಾದ್ವಾರದಲ್ಲಿ ಗಣೇಶನ ಪ್ರತಿಮೆಗಳು ಕಂಡುಬರುತ್ತವೆ.

### ಮುಕ್ತಾಯ

ಈ ರೀತಿಯಾಗಿ ವಿಶ್ವಾದ್ಯಂತ ಪೂಜೆಗೊಳ್ಳುವ ಗಣೇಶ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವನು. ಅವರವರ ಮನೆಗಳಲ್ಲಿ ಶ್ರದ್ಧಾಭಕ್ತಿಗಳಿಂದ ಪೂಜಿಸುತ್ತಿದ್ದ ಗಣೇಶನನ್ನು ಸಾರ್ವತ್ರಿಕಗೊಳಿಸಿದ್ದು ಲೋಕಮಾನ್ಯ ಬಾಲಗಂಗಾಧರ ತಿಲಕರು. ಸ್ವಾತಂತ್ರ್ಯಪೂರ್ವದಲ್ಲಿ ಆರಂಭಗೊಂಡ ಈ ಸಾರ್ವಜನಿಕ ಗಣೇಶೋತ್ಸವ ಇಂದು ಅಪಾರ ಜನಪ್ರಿಯತೆಯನ್ನು ಗಳಿಸಿದೆ. ವಯಸ್ಸು, ಅಂತಸ್ತು, ವಿದ್ಯೆ, ಜಾತಿ ಇವುಗಳ ಹಂಗಿಲ್ಲದೆ ಸಮಸ್ತ ಭಾರತೀಯರು ಈ ಉತ್ಸವದಲ್ಲಿ ಪಾಲ್ಗೊಂಡು ಶ್ರೀಮಹಾಗಣಪತಿಯ ಕೃಪೆಗೆ ಪಾತ್ರರಾಗುತ್ತಾರೆ. ವಿನಾಯಕ, ಗಜಾನನ, ವಿಘ್ನರಾಜ, ವಕ್ರತುಂಡ, ಹೇರಂಬ ಇತ್ಯಾದಿ ಹಲವಾರು ನಾಮಗಳಿಂದ ಗಣೇಶನನ್ನು ಪೂಜಿಸಿ, ಆರಾಧಿಸಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಂಡು ಆತನ ಅನುಗ್ರಹವನ್ನು ಸದಾಕಾಲ ಪಡೆಯುತ್ತಿರುವರು. ಇದು ನಮ್ಮ ಸಂಸ್ಕೃತಿಯ ಹೆಗ್ಗುರುತೂ ಆಗಿರುವುದು.

**ಯುವಚೇತನ**



## ಭರತಖಂಡದ ಏಳಿಗೆ

**ಶಿಷ್ಯ:** ಭರತಖಂಡ ಹೇಗೆ ಮೇಲಕ್ಕೇಳುವುದು?

**ಸ್ವಾಮೀಜಿ:** ನೀನು ನೋಡುತ್ತಿಲ್ಲವೆ? ಪೂರ್ವದಿಗಂತದಲ್ಲಿ ಆಗಲೇ ಸೂರ್ಯೋದಯವಾಗಿದೆ. ಇನ್ನೇನು ಸೂರ್ಯನು ಹುಟ್ಟುತ್ತಾನೆ. ನೀವೆಲ್ಲಾ ಚಕ್ರಕ್ಕೆ ಹೆಗಲು ಕೊಡಿ. ಪ್ರಪಂಚವೇ ನನ್ನ ಸರ್ವಸ್ವವೆಂದು 'ನನ್ನ ಸಂಸಾರ, ನನ್ನ ಸಂಸಾರ' ಎಂದು ಯೋಚಿಸುತ್ತಿದ್ದರೆ ಏನಾದ ಹಾಗಾಯಿತು? ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ, ಗ್ರಾಮ ಗ್ರಾಮಗಳಿಗೆ ಹೋಗಿ, ಸುಮ್ಮನೆ ಸೋಮಾರಿಗಳಂತೆ ಕುಳಿತುಕೊಂಡರೆ ಏನೂ ಫಲವಿಲ್ಲವೆಂದು ಜನರಿಗೆ ಬೋಧಿಸುವುದೇ ನಿಮ್ಮ ಈಗಿನ ಕರ್ತವ್ಯ. ಅವರಿಗೆ ತಮ್ಮ ನೈಜ ಸ್ಥಿತಿಯ ಅರಿವು ಉಂಟಾಗುವಂತೆ ಮಾಡಿ. 'ಓ! ನನ್ನ ಸಹೋದರರೆ, ಎಲ್ಲರೂಎದ್ದೇಳಿ, ಎಚ್ಚರಗೊಳ್ಳಿ. ಇನ್ನೆಷ್ಟು ಕಾಲ ನಿದ್ರಿಸುವಿರಿ!' ಎಂದು ಬೋಧಿಸಿ, ಅವರ ಸ್ಥಿತಿ ಉತ್ತಮಗೊಳ್ಳಲು ಏನು ಮಾಡಬೇಕೆಂಬುದನ್ನು ತಿಳಿಯಹೇಳಿ, ಸ್ಪಷ್ಟವಾದ ಮತ್ತು ಅರ್ಥವಾಗುವ ಭಾಷೆಯಲ್ಲಿ ಅವರಿಗೆ ಶಾಸ್ತ್ರಗಳಲ್ಲಿರುವ ಮಹತ್ತಾದ ಸತ್ಯಗಳ ಪರಿಚಯ ಮಾಡಿಕೊಡಿ. ಇಲ್ಲಿಯವರೆಗೂ ಧರ್ಮವು ಬ್ರಾಹ್ಮಣ ಜಾತಿಗೆ ಮೀಸಲಾಗಿತ್ತು. ಆದರೆ ಪ್ರಬಲ ಕಾಲಪ್ರವಾಹದಲ್ಲಿ ಅವರು ಇಂದು ಅದೇ ಸ್ಥಳದಲ್ಲಿ ಇರಲಾರರು. ದೇಶದ ಪ್ರತಿಯೊಬ್ಬರೂ ಧರ್ಮವನ್ನರಿಯುವಂತೆ ಮಾಡಲು ತೊಡಗಿರಿ, ಬ್ರಾಹ್ಮಣರಷ್ಟೇ ತಮಗೂ ಹಕ್ಕಿದೆ ಎಂಬ ಭಾವನೆ ಅವರ ಮನಸ್ಸಿನಲ್ಲಿ ನಾಟುವಂತೆ ಮಾಡಿ. ಪ್ರತಿಯೊಬ್ಬರಿಗೂ, ಚಂಡಾಲರಿಗೂ ಈ ಪ್ರಜ್ವಲಿಸುವ ಮಂತ್ರದೀಕ್ಷೆ ಕೊಡಿ, ಸರಳ ಮಾತಿನಲ್ಲಿ ಅವರಿಗೆ ಜೀವನ, ವ್ಯಾಪಾರ, ವ್ಯವಹಾರ, ವ್ಯವಸಾಯ ಮುಂತಾದುವುಗಳ ಬಗ್ಗೆ ಶಿಕ್ಷಣ ಕೊಡಿ. ಇದನ್ನು ನೀನು ಮಾಡಲಶಕ್ತನಾದಲ್ಲಿ ನಿನ್ನ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಗೆ ಧಿಕ್ಕಾರ ! *(ಕೃತಿಶ್ರೇಣಿ, ೮.೧೪೮)*